**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಎಸ್ ಸಿ ಸಂಖ್ಯೆ:**49/2020**

ಪ್ರಾಸಾ.**10**/ಚಾಸಾ.**13**

ಸಾಕ್ಷಿದಾರರ ಹೆಸರು : ಕೃಷ್ಣಾರೆಡ್ಡಿ
ತಂದೆ ಹೆಸರು : ಲೇಟ್ ಮುನಿಶಾಮಯ್ಯ
ವಯಸ್ಸು : **52** ವರ್ಷಗಳು
ಉದ್ಯೋಗ : ವ್ಯವಸಾಯ
ವಾಸ : ಬೋಜೆನಹಳ್ಳಿ

ಪ್ರಮಾಣ ವಚನ ಬೋಧಿಸಿದ ದಿನಾಂಕ: **09.07.2025**

ಮುಖ್ಯ ವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ

ಈಗ ನನಗೆ ತೋರಿಸಿದ ದಾಖಲೆಯಲ್ಲಿನ ರುಜು ನನ್ನ ರುಜು. ಸಾಕ್ಷಿಗೆ ದಿನಾಂಕ 06.10.2018 ರ ಅಮಾನತ್ತು ಪಂಚನಾಮೆಯ ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆಯನ್ನು ಈಗ ನಿಪಿ-33 ಎಂದು, ದಾಖಲೆಯಲ್ಲಿನ ಸಾಕ್ಷಿಯ ರುಜುವನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ನಾನು ಒಪ್ಪಿಕೊಂಡ ರುಜುವನ್ನು ಮಾಡಿ ಈಗಾಗಲೇ 7-8 ವರ್ಷಗಳಾಗಿದೆ.

ನಾನು ಸದರಿ ರುಜುವನ್ನು ಬೋಜೆನಹಳ್ಳಿ ಗ್ರಾಮದ ಬಸ್ ನಿಲ್ದಾಣದ ಬಳಿ ಮಾಡಿದ್ದೇನೆ. ಪೊಲೀಸರು ಮಹಜರು ದಾಖಲೆಯೆಂದು ನಮೂಧಿಸಿ ನನ್ನ ರುಜು ಪಡೆದಿದ್ದರೂ. ಆದರೆ ಪೊಲೀಸರು ನನ್ನನ್ನು ಎಲ್ಲಿಯೂ ಕರೆದುಕೊಂಡು ಹೋಗಿಲ್ಲ ನನ್ನ ಸಮಕ್ಷಮ ಏನನ್ನು ಜಪ್ತಿ ಮಾಡಿಲ್ಲ. ನಿಪಿ-33 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ.

ಆರೋಪಿಗಳು ನನಗೆ ಮುಖಪರಿಚಿತರು ಆದರೆ ಅವರ ಹೆಸರುಗಳಿಂದ ನನಗೆ ಪರಿಚಯವಿಲ್ಲ.

**(**ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಕೋರಿದ್ದು**,** ಕೋರಿಕೆ ಸಮರ್ಪಕವಾಗಿದ್ದು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲಾಗಿದೆ**.)**

<u>ಪಾಟೀ ಸವಾಲುಃ ರಾಜ್ಯದ ಪರ ಅಭಿಯೋಜಕರಿಂದಃ</u>

ದಿನಾಂಕ 06.10.2018 ರಂದು 4 ನೇ ಆರೋಪಿ ನನ್ನನ್ನು ಮತ್ತು ಇತರರನ್ನು ಗೌರಮ್ಮನ ಕೆರೆಯ ಅಂಗಳದ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು ನಮ್ಮ ಸಮಕ್ಷಮ ಆತ ಸ್ಥಳವನ್ನು ತೋರಿಸಿ ಕೃತ್ಯಕ್ಕೆ ಬಳಿಸಿದ್ದ ದೊಣ್ಣೆ, ಸಲಿಕೆ ಮತ್ತು ಟಾರ್ಚ ಅನ್ನು ತೋರಿಸಿ ನೀಡಿದ ಮೇರೆಗೆ, ಪೊಲೀಸರು ಸದರಿ ದಿನದ ಮಧ್ಯಾಹ್ನ 03 ರಿಂದ 04 ಗಂಟೆ ಸಮಯದಲ್ಲಿ ನನ್ನ ಹಾಗೂ ಚಾಸಾ-14 ರವರ ಸಮಕ್ಷಮ ನಿಪಿ-33 ರಂತೆ ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಸೂಚಿಸಿದ ದೊಣ್ಣೆ, ಸಲಿಕೆ ಮತ್ತು ಟಾರ್ಚ ಗಳನ್ನು ಅಮಾನತ್ತು ಕ್ರಮಕ್ಕೆ ಒಳಪಡಿಸಿರುವ ಸಂಗತಿಗಳು ನನಗೆ ಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡುವ ಸಲುವಾಗಿ ಸತ್ಯ ಸಂಗತಿಗಳನ್ನು ಮರೆಮಾಚಿ ಸುಳ್ಳು ನುಡಿದೆ ಎಂದರೆ ಸರಿಯಲ್ಲ

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ಪಾಟೀ ಸವಾಲು ಇಲ್ಲ ಎಂದು ತಿಳಿಸುತ್ತಾರೆ.

**(**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

ಓ. ಹೇ. ಕೇ. ಸ. ಒ.

(ಸಿದ್ದಲಿಂಗ ಪ್ರಭು)
1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.